674

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೋಟಗಾರಿಕೆ ಸ್ಥಾಯಿ ಸಮಿತಿಯು ದಿನಾಂಕ: 20-03-2020 ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ.

ವಿಷಯದ ಸಂಖ್ಯೆ: ತೋ.ಸ್ಥಾ.ಸ/ಪಿ.ಆರ್/12/2019-20 ದಿನಾಂಕ: 10.03.2020

ವಿಷಯ : Providing Pathway, Children play equipment and other Development works in park at Doddabommasandra Lake in Ward no. 10 ಕಾಮಗಾರಿಯ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಅನುಮೋದನೆ ನೀಡುವ ಕುರಿತು.

ಉಲ್ಲೇಖ : ಮಾನ್ಯ ಆಯುಕ್ತರು ರವರ ಕಛೇರಿ ಆದೇಶದ ಸಂಖ್ಯೆ:ಬಿಎಸ್ಆರ್(ಜಿ)/7143 /2019-20, ದಿನಾಂಕ:06/03/2020

*****

ಪ್ರಸ್ತಾವನೆ:

ಪ್ರಧಾನ ಅಭಿಯಂತರರು (ಪ್ರಭಾರ)ರವರ ದಿನಾಂಕ: 06.03.2020ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೇಲ್ಕಾಣಿಸಿದ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಕೆರೆಗಳು ರವರು ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 (ಇಬ್ಬರು) ಟೆಂಡರ್ ಸ್ವೀಕೃತವಾಗಿದ್ದು, ಟೆಂಡರ್‌ದಾರರಾದ ಶ್ರೀ.ಮಹೇಶ್.ಕೆ.ಎನ್ ಮತ್ತು ಶ್ರೀ. ಅರುಣ್ ಕುಮಾರ್.ಬಿ ರವರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು, ಕೆರೆಗಳು ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ. ಮಹೇಶ್.ಕೆ.ಎನ್ ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ & 2018-19 ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಯ ಆಧಾರದ ಮೇಲೆ **ರೂ.250.00 ಲಕ್ಷಗಳ** ಅಂದಾಜುಪಟ್ಟಿಗೆ ಮುಖ್ಯ ಅಭಿಯಂತರರು, ಕೆರೆಗಳು ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು **ರೂ.2,18,36,450.01** (ಜಿ.ಎಸ್.ಟಿ.ಹೊರತುಪಡಿಸಿ)ಗಳಾಗಿದ್ದು, ಗುತ್ತಿಗೆದಾರರಾದ ಶ್ರೀ. ಮಹೇಶ್.ಕೆ.ಎನ್ ರವರು ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತ **ರೂ.2,41,94,858.62** (ಜಿ.ಎಸ್.ಟಿ.ಹೊರತುಪಡಿಸಿ) ಗಳಿದ್ದು, ಪ್ರಸ್ತುತ ಚಾಲ್ತಿಯಲ್ಲಿರುವ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ & 2018-19 ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡಾ **+10.80 ಹೆಚ್ಚು** ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಂತರ ಕಾರ್ಯಪಾಲಕ ಅಭಿಯಂತರರು, ಕೆರೆಗಳು ರವರು ದರ ಸಂಧಾನ ಮಾಡಲಾಗಿ ಶ್ರೀ. ಮಹೇಶ್.ಕೆ.ಎನ್ ರವರು ಒಪ್ಪಿರುವ ಸಂಧಾನ ನಂತರದ ಟೆಂಡರ್ ಮೊತ್ತವಾದ **ರೂ.2,35,83,366.00** (ಜಿ.ಎಸ್.ಟಿ.ಹೊರತುಪಡಿಸಿ) ಗಳು ಪ್ರಸ್ತುತ ಚಾಲ್ತಿಯಲ್ಲಿರುವ ದರಪಟ್ಟಿಗೆ ಹೋಲಿಸಿದಾಗ

Umadevi.B.B.
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

117

673

ಶೇಕಡಾ **+8.00 ಹೆಚ್ಚು** ದರಗಳಾಗಿರುತ್ತದೆ. ತದನಂತರ ಮುಖ್ಯ ಅಭಿಯಂತರರು, ಕೆರೆಗಳು ರವರು ಮರು ಪರಿ ಸಂಧಾನ ಮಾಡಲಾಗಿ ಶ್ರೀ. ಮಹೇಶ್.ಕೆ.ಎನ್ ರವರು ಒಪ್ಪಿರುವ ಸಂಧಾನ ನಂತರದ ಟೆಂಡರ್ ಮೊತ್ತವಾದ **ರೂ.2,29,17,354.00/-** (ಜಿ.ಎಸ್.ಟಿ.ಹೊರತುಪಡಿಸಿ) ಗಳು ಪ್ರಸ್ತುತ ಚಾಲ್ತಿಯಲ್ಲಿರುವ ದರಪಟ್ಟಿಗೆ ಹೋಲಿಸಿದಾಗ ಶೇಕಡಾ **+4.95 ಹೆಚ್ಚು** ದರಗಳಾಗಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) **ರೂ.2,29,17,354.00/-** (ಜಿ.ಎಸ್.ಟಿ.ಹೊರತುಪಡಿಸಿ) ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ/615/ಎಮ್‌ಎನ್‌ವೈ/2015, ದಿನಾಂಕ:01.03.2016 ರ ರೀತ್ಯಾ ಸದರಿ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ. ಮಹೇಶ್.ಕೆ.ಎನ್ ರವರು ಸಂಧಾನದ ನಂತರ ಪ್ರಸ್ತುತ ಚಾಲ್ತಿಯಲ್ಲಿರುವ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ & 2018-19 ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ **ಶೇಕಡಾ +4.95 ರಷ್ಟು ಹೆಚ್ಚು** ದರಗಳನ್ನು ನಮೂದಿಸಿದ್ದು, ನಮೂದಿಸಿರುವ ಮೊತ್ತವಾದ **ರೂ.2,29,17,354.00/-** (ಜಿ.ಎಸ್.ಟಿ.ಹೊರತುಪಡಿಸಿ) (ರೂ. ಎರಡು ಕೋಟಿ ಇಪ್ಪತ್ತೊಂಭತ್ತು ಲಕ್ಷದ ಹದಿನೇಳು ಸಾವಿರದ ಮೂರು ನೂರ ಐವತ್ತನಾಲ್ಕು ಗಳು ಮಾತ್ರ) ಗಳ **ಟೆಂಡರ್‌ನ ಅನುಮೋದನೆಗೆ ಮತ್ತು ರೂ. 250.00 ಲಕ್ಷಗಳ ಅಂದಾಜುಪಟ್ಟಿಗೆ** ತೋಟಗಾರಿಕೆ ಸ್ಥಾಯಿ ಸಮಿತಿಯಿಂದ **ಆಡಳಿತಾತ್ಮಕ ಅನುಮೋದನೆ** ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಪ್ರಧಾನ ಅಭಿಯಂತರರು (ಪ್ರಭಾರ) ರವರ ದಿನಾಂಕ: 10.03.2020ರ ಟಿಪ್ಪಣಿ.

ನಿರ್ಣಯ: ಪ್ರಧಾನ ಅಭಿಯಂತರರವರ ದಿನಾಂಕ: 10-03-2020 ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.

umadevi.BB.
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕ್ರ ಸಂ	ಹೆಸರು ಶ್ರೀಯುತರುಗಳಾದ	ಪದನಾಮ	
1	ಉಮಾದೇವಿ ನಾಗರಾಜ	ಅಧ್ಯಕ್ಷರು	umadevi.BB
2	ಹಾನಾ ಭುವನೇಶ್ವರಿ (ಭುವನ)	ಸದಸ್ಯರು	
3	ಜಿ. ಕೋಕಿಲಾ ಚಂದ್ರಶೇಖರ್	ಸದಸ್ಯರು	G Kokila
4	ಬಾಲಕೃಷ್ಣನ್ ಜಿ.	ಸದಸ್ಯರು	

672

5	ಡಿ.ಎನ್. ರಮೇಶ್	ಸದಸ್ಯರು	
6	ಎಸ್. ಸಂಪತ್ ಕುಮಾರ್	ಸದಸ್ಯರು	
7	ಎಂ. ಮಾಲತಿ	ಸದಸ್ಯರು	
8	ಯಶೋಧ ಲಕ್ಷ್ಮೀಕಾಂತ	ಸದಸ್ಯರು	
9	ಶ್ರೀಲತ ಸಿ.ಜಿ ಗೋಪಿನಾಥರಾಜು	ಸದಸ್ಯರು	
10	ವಿ. ಬಾಲಕೃಷ್ಣ	ಸದಸ್ಯರು	
11	ಜಿ.ಕೃಷ್ಣಮೂರ್ತಿ	ಸದಸ್ಯರು	

umadevi.BB,
ಅಧ್ಯಕ್ಷರು
ತೋಟಗಾರಿಕೆ ಸ್ವಾಯ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.